# ಮುಚ್ಚಿದ ಮನಸೊಳಗೆ ಕಾಡುವ ಬೆತ್ತಲೆ ಸತ್ಯ

**ಬೆತ್ತಲೆ ದೇಹದ ಪ್ರತಿಮೆಯ ಮೂಲಕ ಬದುಕಿನ ಮೂಲಭೂತ ಸತ್ಯಗಳ ಹುಡುಕಾಟ ಮಾಡುವ ಘನವಾದ ಪ್ರಯತ್ನ ಈ ಕಿರುಚಿತ್ರದಲ್ಲಿದೆ.**

■ ಗೌರಿ



‘ದಿ ನೇಕೆಡ್ ವುಮೆನ್’ ಇದು ಆ್ಯಲೀ ಆ್ಯವಿತಾಲ್ ನಿರ್ದೇಶನದ ಕಿರುಚಿತ್ರದ ಹೆಸರು. ನೇಕೆಡ್ ವುಮೆನ್ ಎನ್ನುವ ಪರಿಕಲ್ಪನೆ ಈ ಕಿರುಚಿತ್ರದಲ್ಲಿಯಷ್ಟೇ ಅಲ್ಲ, ಅವರ ಸೃಜಶೀಲ ಜೀವನದುದ್ದಕ್ಕೂ ಹಲವು ಬಗೆಗಳಲ್ಲಿ ಪರಿಶೋಧನೆಗೊಳಗಾಗುತ್ತಿರುವ ಪರಿಕಲ್ಪನೆ.

ಆ್ಯಲಿ, ತನ್ನ ವಿಡಿಯೊ ಆಲ್ಬಂಗಳಿಂದ ಗಮನ ಸೆಳೆದವರು. ಇದು ಅವರ ಮೊದಲ ಕಿರುಚಿತ್ರ. ‘ವರ್ಲ್ಡ್ ವಾರ್ ಪಾರ್ಟ್ 2’, ‘ಕ್ವಾರಲ್’ ಸೇರಿದಂತೆ ಅವರ ಎಲ್ಲ ವಿಡಿಯೊ ಆಲ್ಬಂಗಳಲ್ಲಿಯೂ ಈ ‘ನೇಕೆಡ್ ವುಮೆನ್’, ಹಲಬಗೆಯ ಅರ್ಥಸಾಧ್ಯತೆಗಳನ್ನು ಹೊಮ್ಮಿಸುವ ಪ್ರತಿಮೆಯಾಗಿ ಬರುತ್ತದೆ.

ಒದ್ದೆ ಕಾಗದದ ಮೇಲೆ ಒಂದು ಹನಿ ಶಾಯಿ ಚೆಲ್ಲಿದರೆ ಅದು ನಿಧಾನಕ್ಕೆ ಸುತ್ತಲೂ ಪದರ ಪದರವಾಗಿ ಹರಡುತ್ತ ಹೋಗುತ್ತದಲ್ಲ... ‘ನೇಕೆಡ್ ವುಮೆನ್’ ಚಿತ್ರ ಉಂಟು ಮಾಡುವ ಪರಿಣಾಮವೂ ಅಂಥದ್ದೇ.

ತನ್ನ ಬದುಕಿನಲ್ಲಿ, ಸುತ್ತಲಿನ ಜಗತ್ತಿನಲ್ಲಿ ನಡೆಯುತ್ತಿರುವ ಆಗುಹೋಗುಗಳ ಮೇಲೆ ನಿಜಕ್ಕೂ ಮನುಷ್ಯನ ನಿಯಂತ್ರಣ ಎಷ್ಟಿದೆ. ಅದರಲ್ಲಿ ಅವನ ಪಾಲು–ಪಾತ್ರಗಳೇನು? ಪರಿಣಾಮಕ್ಕೆ ಅವನೆಷ್ಟು ಜವಾಬ್ದಾರ? ಅಷ್ಟಕ್ಕೂ ಈ ಎಲ್ಲವೂ ನಡೆಯುತ್ತಿರುವುದು ಹೊರಗಿನ ಜಗದೊಳಗಾ ಮನುಷ್ಯನೊಳಗಾ? ಹೀಗೆ ಅಸ್ತಿತ್ವಕ್ಕೆ ಸಂಬಂಧಿಸಿದ ಹಲವು ಮೂಲಭೂತ ಪ್ರಶ್ನೆಗಳಿಗೆ ಎದುರಾಗುವ ಸಂಕಟವನ್ನು ಈ ಕಿರುಚಿತ್ರ ನಮಗೆ ದಾಟಿಸುತ್ತದೆ.

ಮಿಶಾ ಎಂಬ ನಡುವಯಸ್ಸು ದಾಟಿದ ವ್ಯಕ್ತಿ ಬೆಳಿಗ್ಗೆ ಜಾಗ್ ಮಾಡುತ್ತಿರುತ್ತಾನೆ. ಆಗ ಅವನಿಗೆ ಹೆಣ್ಣಿನ ಚೀತ್ಕಾರ ಕಿವಿಗೆ ಬೀಳುತ್ತದೆ. ನೋಡನೋಡುತ್ತಿರುವ ಹಾಗೆಯೇ ಕಣ್ಣೆದುರಿನ ತಿರುವಿನ ಕಾಡಿನೊಳಗಿಂದ ರಸ್ತೆಗೆ ಹೆಣ್ಣೊಬ್ಬಳು ಬೆತ್ತಲಾಗಿ ಓಡಿಬರುತ್ತಾಳೆ. ‘ಹೆಲ್ಪ್... ಹೆಲ್ಪ್..’ ಎಂದು ಜೀವಭಯದಿಂದ ಓಡಿ



ಹೆಸರು: ದಿ ನೇಕೆಡ್ ವುಮನ್ (ಇಂಗ್ಲಿಷ್, ರಷ್ಯನ್)
ನಿರ್ದೇಶನ: ಆ್ಯಲೀ ಆ್ಯವಿತಾಲ್
ನಿರ್ಮಾಣ: ಮೆಘಾನ್ ಡೊಹರ್ಟಿ
ಛಾಯಾಗ್ರಹಣ: ಸೊಂಜಾ ಸೈಫಿನ್ ಮತ್ತು ಮ್ಯಾಕ್ಸ್ ಲಾಕ್ನೇರ್
ಸಂಕಲನ: ಯಾನಾ ಕರೀನ್
ತಾರಾಗಣ: ಆ್ಯಂಡ್ರೇ ಕೌಜ್ನೇಟ್ಸೋವ್, ವೆಲೆರಿಯಾ ಕೊಲೆರ್ನಯಾ, ಡೇನಿಯೆಲ್ಲಾ ಆಲ್ಮಾ

ಬರುತ್ತಿರುವವಳನ್ನು ಮಿಶಾ ನಿಂತು ನೋಡುತ್ತಾನೆ. ನೋಡುತ್ತಿರುವ ಹಾಗೆಯೇ ಹಿಂದಿನಿಂದ ಬಂದ ಕಾರೊಂದು ಅವಳನ್ನು ಸೆಳೆದುಕೊಂಡು ಹೊರಟುಹೋಗುತ್ತದೆ. ಇವೆಲ್ಲವೂ ಕೆಲವೇ ಕ್ಷಣಗಳಲ್ಲಿ ನಡೆದುಹೋಗುತ್ತದೆ.

ಮಿಶಾ ಮನೆಗೆ ಬರುತ್ತಾನೆ. ಅನ್ಯಮನಸ್ಕನಾಗಿದ್ದ ಅವನನ್ನು ಹೆಂಡತಿ ಏನಾಯಿತು ಎಂದು ಪ್ರಶ್ನಿಸುತ್ತಾನೆ. ಅವಳಿಗೆ ನಡೆದಿದ್ದನ್ನು ಹೇಳುತ್ತಾಳೆ. ‘ಅವಳು ಹೆಲ್ಪ್ ಎಂದು ಕೂಗಿಕೊಳ್ಳುತ್ತಿದ್ದರೂ ನೀವ್ಯಾಕೆ ಸಹಾಯ ಮಾಡಲಿಲ್ಲ?’ ಹೆಂಡತಿಯ ಬಾಯಿಯಿಂದ ತೂರಿಬಂದ ಪ್ರಶ್ನೆ ಮಿಶಾನನ್ನು ಇನ್ನಷ್ಟು ದಿಕ್ಕೆಡುವಂತೆ ಮಾಡುತ್ತದೆ. ಯಾಕೆಂದರೆ ಅದು ಅವನಿಗೆ ಅವನೇ ಕೇಳಿಕೊಳ್ಳುತ್ತಿರುವ ಪ್ರಶ್ನೆಯೂ ಹೌದು!

ಆ ಕ್ಷಣದಲ್ಲಿ, ‘ನನಗೆ ಅಷ್ಟು ಸಮಯ ಇರಲಿಲ್ಲ. ತಕ್ಷಣಕ್ಕೆ ಅಲ್ಲಿಗೆ ತಲುಪಲು ಸಾಧ್ಯವಾಗಲಿಲ್ಲ’ ಹೀಗೆ ಏನೇನೋ ಕಾರಣ ಕೊಟ್ಟು ತಪ್ಪಿಸಿಕೊಳ್ಳುತ್ತಾನೆ. ಆದರೆ ಅವೆಲ್ಲವೂ ಪೂರ್ತಿ ಸತ್ಯ ಅಲ್ಲ ಎಂಬುದು ಅವನಿಗೂ ಗೊತ್ತು; ಹೆಂಡತಿಗೂ ಗೊತ್ತು.

ಅಂದೇ ಮಿಶಾನ ಮಕ್ಕಳು, ಸಂಬಂಧಿಕರೆಲ್ಲ ಬರುತ್ತಾರೆ. ಮನೆಯಲ್ಲಿ ವೀಕೆಂಡ್ ಪಾರ್ಟಿ. ಮಿಶಾನಿಗೆ ಕಾಡಿನಿಂದ ಓಡಿ ಬರುತ್ತಿದ್ದ ಬೆತ್ತಲೆ ಹುಡುಗಿಯ ಚಿತ್ರವೇ ಮನಸೊಳಗೆ ಬೆಳೆಯುತ್ತಿರುತ್ತದೆ. ತಾನ್ಯಾಕೆ ಸಹಾಯ ಮಾಡಲಿಲ್ಲ? ಕಾರು ತನ್ನ ಹತ್ತಿರದಿಂದ ಹೋಗುವಾಗ ಹಿಂಬದಿ ಸೀಟಲ್ಲಿ ಕೂತು ಗಾಜಿನೊಳಗಿಂದ ತನ್ನನ್ನೇ ನೋಡುತ್ತಿದ್ದ ಹುಡುಗಿಯ ಕಣ್ಣುಗಳಲ್ಲಿ ಏನೆಲ್ಲ ಪ್ರಶ್ನೆಗಳಿದ್ದವು? ಅವಳು ಆಡದೆ ಉಳಿದ ಮಾತುಗಳು ನನ್ನ ಬಗ್ಗೆ ಯಾವ ಭಾವ ತಳೆದಿರಬಹುದು? ಕ್ಷಣಾರ್ಧದಲ್ಲಿ ಸರಿದು ಹೋದ ಹುಡುಗಿ ಮನಸಲ್ಲಿ ಬೆಳೆಯುತ್ತಲೇ ಹೋಗುವ ಪರಿಗೆ ಅವನು ತತ್ತರಿಸುತ್ತಾನೆ.

ಅಂದು ರಾತ್ರಿ ಊಟದ ಸಮಯದಲ್ಲಿಯೂ ಈ ವಿಷಯ ಪ್ರಸ್ತಾಪವಾಗುತ್ತದೆ. ಮಿಶಾ ಯಾಕೆ ಸಹಾಯ ಮಾಡಲಿಲ್ಲ? ಆ ಹುಡುಗಿಗೆ ಏನಾಗಿರಬಹುದು? ಎಂದು ಒಬ್ಬೊಬ್ಬರು ಒಂದೊಂದು ರೀತಿ ಊಹೆ ಮಾಡಿಕೊಂಡು ಕಥೆ ಕಟ್ಟುತ್ತಾರೆ. ಆ ಊಹೆ ಅವರ ಮನಸ್ಸಿನೊಳಗಿನ ತಲ್ಲಣಗಳನ್ನೂ ಬಿಂಬಿಸುವ ಹಾಗಿರುತ್ತದೆ.

ಬಿಟ್ಟೂ ಬಿಡದಂತೆ ಮಿಶಾನನ್ನು ಸುತ್ತಿ ಹಣೆಯುವ ಬೆತ್ತಲೆ ಹುಡುಗಿಯನ್ನು ನಿರ್ದೇಶಕಿ, ಅವನ ಮನಸ್ಸಿನ ತಲ್ಲಣಗಳನ್ನು ಧ್ವನಿಸುವ ಪ್ರತಿಮೆಯಾಗಿಸಿಬಿಟ್ಟಿದ್ದಾರೆ. ಆ ಇಡೀ ಘಟನೆಯೇ ನಿಜವಾಗಿ ನಡೆದಿದ್ದೋ ಮಿಶಾನ ಮನಸಲ್ಲಿ ಅನುದಿನವೂ ಘಟಿಸುತ್ತಿರುವುದೋ ಎಂಬ ಪ್ರಶ್ನೆಯನ್ನು ಎದುರಿಗೆ ಎಸೆದು ಕಿರುಚಿತ್ರ ಮುಕ್ತಾಯಗೊಳ್ಳುತ್ತದೆ. ಆ ಪ್ರಶ್ನೆ ನಮ್ಮ ಮನಸಲ್ಲಿ ಹಲವು ಪದರಗಳಾಗಿ ಹರಡುತ್ತಲೇ ಇರುತ್ತದೆ; ಒದ್ದೆ ಹಾಳೆಯ ಮೇಲಿನ ಶಾಯಿಯ ಹಾಗೆ!

ಈ ಕಿರುಚಿತ್ರ ವೀಕ್ಷಣೆಗೆ **bit.ly/2yHKK2L** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.